**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕೃಷ್ಣರಾಜಪೇಟೆ.**

**ಸಿ.ಸಿ. ನಂ. 161/2020**

ಫಿರ್ಯಾದುದಾರರು : ಆರಕ್ಷಕ ಉಪ ನಿರೀಕ್ಷಕರು,
ಕೆ.ಆರ್.ಪೇಟೆ ಗ್ರಾಮಾಂತರ ಪೊಲೀಸ್ ಠಾಣೆ

ವಿರುದ್ಧ

ಆರೋಪಿತರು ::
1. ಯೋಗೇಶ್ ಬಿನ್ ಕರಿಗೌಡ,
57 ವರ್ಷ, ವ್ಯವಸಾಯ,
2. ರವಿ ಬಿನ್ ಕರಿಗೌಡ,
52 ವರ್ಷ, ವ್ಯವಸಾಯ,
3. ಸಾವಿತ್ರಿ ಕೋಂ ಯೋಗೇಶ್,
42 ವರ್ಷ, ಗೃಹಿಣಿ,
4. ರಾಧ ಕೋಂ ರವಿ,
40 ವರ್ಷ, ಗೃಹಿಣಿ
5. ಶಿವು ಬಿನ್ ರವಿ,
24 ವರ್ಷ, ವ್ಯವಸಾಯ,
ಎಲ್ಲರೂ ವಾಸಃ ಮಾಚಗೋನಹಳ್ಳಿ ಗ್ರಾಮ
ಕೃಷ್ಣರಾಜಪೇಟೆ ತಾಲ್ಲೂಕು.

**-:: ದೋಷಾರೋಪಣೆ ::-**

ಶ್ರೀ ಶಮೀರ್ ಪಿ. ನಂದ್ಯಾಲ್, ಪ್ರ.ದ.ನ್ಯಾ.ದಂಡಾಧಿಕಾರಿಗಳು, ಕೃಷ್ಣರಾಜಪೇಟೆ ಆದ ನಾನು ಮೇಲೆ ಹೇಳಿದ ಆರೋಪಿಯಾದ ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸಿರುತ್ತೇನೆ.

ದಿನಾಂಕ 07-11-2019 ರಂದು ಬೆಳಿಗ್ಗೆ 8 ಗಂಟೆ ಸಮಯದಲ್ಲಿ ಕೆ.ಆರ್.ಪೇಟೆ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಮಾಚಗೋನಹಳ್ಳಿಯ ಗ್ರಾಮದ ಚಾಸಾ.01/ಲಕ್ಷ್ಮಮ್ಮ ರವರ ಮನೆಯ ಹತ್ತಿರ, ಚಾಸಾ.01/ಲಕ್ಷ್ಮಮ್ಮ ಮತ್ತು ಚಾಸಾ.02/ರಾಮಕೃಷ್ಣೇಗೌಡ ರವರು ಇದ್ದಾಗ ಆರೋಪಿತರಾದ ನೀವುಗಳು ಗೋಡೆ ಕಟ್ಟುವ ವಿಚಾರದಲ್ಲಿ ಹಳೆಯ ದ್ವೇಷವನ್ನು ಇಟ್ಟುಕೊಂಡು, ನಿಮ್ಮಗಳ ಏಕೋದ್ದೇಶನ್ನು ಈಡೇರಿಸಿಕೊಳ್ಳಲು ಅಕ್ರಮವಾಗಿ ಗುಂಪುಕಟ್ಟಿಕೊಂಡು ಬಂದು, ಭಾ.ದಂ.ಸಂ ಕಲಂ 143 ಸಹವಾಚಕ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ ಎಂದು,

2. ಎರಡನೆಯದಾಗಿ ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವುಗಳು ನಿಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳಲು ಚಾಸಾ.01/ಲಕ್ಷ್ಮಮ್ಮ ಮತ್ತು ಚಾಸಾ.02/ರಾಮಕೃಷ್ಣೇಗೌಡ ರವರನ್ನು ಉದ್ದೇಶಿಸಿ ಅವಾಚ್ಯ ಶಬ್ದಗಳಿಂದ ಬೈದಿದ್ದು, ಭಾ.ದಂ.ಸಂ ಕಲಂ 504

ಸಹವಾಚಕ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ ಎಂದು,

3. ಮೂರನೆಯದಾಗಿ ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವುಗಳು ನಿಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳಲು, ನಿಮ್ಮಲ್ಲಿ 1 ನೇ ಆರೋಪಿಯ ಚಾಸಾ.01/ಲಕ್ಷ್ಮಮ್ಮ ರವರ ಕೈಯನ್ನು ಹಿಡಿದುಕೊಂಡು ಎಳೆದಾಡಿ ಅಲ್ಲಿಯೇ ಬಿದಿದ್ದ ಇಟ್ಟಿಗೆಯಿಂದ ಚಾಸಾ.01 ರವರ ಎಡ ಕೈ ಮೇಲೆ ಹೊಡೆದು, 2 ನೇ ಆರೋಪಿಯು ಇಟ್ಟಿಗೆಯಿಂದ ಚಾಸಾ.01/ಲಕ್ಷ್ಮಮ್ಮ ರವರ ಎದೆಯ ಮೇಲೆ ಹೊಡೆದು, 5 ನೇ ಆರೋಪಿಯು ದೊಣ್ಣೆಯಿಂದ ಚಾಸಾ.02/ರಾಮಕೃಷ್ಣೇಗೌಡ ರವರ ಮೈ ಕೈ ಮೇಲೆ ಹೊಡೆದಿದ್ದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಈ ಪ್ರಕಾರ ಭಾ.ದಂ.ಸಂ ಕಲಂ 324 ಸಹವಾಚಕ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ ಎಂದು,

4. ನಾಲ್ಕನೆಯದಾಗಿ ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವುಗಳು ನಿಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳಲು, ನಿಮ್ಮಲ್ಲಿ 3 ನೇ ಆರೋಪಿಯು ಚಾಸಾ.01 ರವರ ಮುಂದಲೆಯನ್ನು ಹಿಡಿದು ಎಳೆದಾಡಿ ಕಾಲಿನಿಂದ ಹೊಟ್ಟೆಯ ಮೇಲೆ ವದ್ದು, 1 ರಿಂದ 5 ನೇ ಆರೋಪಿತರು ಚಾಸಾ.01/ಲಕ್ಷ್ಮಮ್ಮ ಮತ್ತು ಚಾಸಾ.02/ರಾಮಕೃಷ್ಣೇಗೌಡ ರವರನ್ನು ಕೆಳಕ್ಕೆ ಕಡೆವಿಕೊಂಡು ಕಾಲುಗಳಿಂದ ತುಳಿದು ನೋವುಂಟು ಮಾಡಿದ್ದು ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಈ ಪ್ರಕಾರ ಭಾ.ದಂ.ಸಂ ಕಲಂ 323 ಸಹವಾಚಕ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ ಎಂದು,

5. ಐದನೇಯದಾಗಿ ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವುಗಳು ನಿಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳಲು, ನಿಮ್ಮಲ್ಲಿ 4 ನೇ ಆರೋಪಿಯು ಚಾಸಾ.02/ರಾಮಕೃಷ್ಣೇಗೌಡ ರವರ ಅಂಗಿಯ ಕೊರಳಿನ ಪಟ್ಟಿಯನ್ನು ಹಿಡಿದು ಎಳೆದಾಡಿದ್ದು, 1 ನೇ ಆರೋಪಿಯು ಚಾಸಾ.01/ಲಕ್ಷ್ಮಮ್ಮ ರವರ ರವಿಕೆಯನ್ನು ಹಿಡಿದು ಎಳೆದಾಡಿ ಹರಿದು ಹಾಕಿ ಸಾರ್ವಜನಿಕವಾಗಿ ಅವಮಾನ ಮಾಡಿ ಅವರ ಮಾನಕ್ಕೆ ಕುಂದುಂಟು ಮಾಡಿದ್ದು, ಈ ಪ್ರಕಾರ ಭಾ.ದಂ.ಸಂ ಕಲಂ 354 ಸಹವಾಚಕ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ ಎಂದು,

6. ಆರನೇಯದಾಗಿ ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 2 ನೇ ಆರೋಪಿಯು ಚಾಸಾ.01/ಲಕ್ಷ್ಮಮ್ಮ ಮತ್ತು ಚಾಸಾ.02/ರಾಮಕೃಷ್ಣೇಗೌಡ ರವರನ್ನು ಉದ್ದೇಶಿಸಿ ಇವರನ್ನು ಬಿಡಬೇಡಿ ಇಲ್ಲಿಯೇ ಕೊಲೆ ಮಾಡಿ ಎಂದು ಉಳಿದ ಆರೋಪಿರಿಗೆ ಕುಮ್ಮಕ್ಕು ನೀಡಿದ್ದು, ಈ ಪ್ರಕಾರ ಭಾ.ದಂ.ಸಂ ಕಲಂ 114

ಸಹವಾಚಕ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ ಎಂದು,

7. ಕೊನೆಯದಾಗಿ ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವುಗಳು ನಿಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳಲು, ಚಾಸಾ.01/ಲಕ್ಷ್ಮಮ್ಮ ಮತ್ತು ಚಾಸಾ.02/ರಾಮಕೃಷ್ಣೇಗೌಡ ರವರನ್ನು ಉದ್ದೇಶಿಸಿ ಈ ದಿನ ಬದುಕ್ಕಿದ್ದೀರಾ ನಿಮ್ಮನ್ನು ನಮ್ಮಲ್ಲಿ ಯಾರಾದರೂ ಒಬ್ಬರು ಚಾಕುವಿನಿಂದ ಚುಚ್ಚಿ ಕೊಲೆ ಮಾಡದೇ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿ ಪ್ರಾಣ ಭಯವನ್ನುಂಟು ಮಾಡಿದ್ದು, ಈ ಪ್ರಕಾರ ಭಾ.ದಂ.ಸಂ ಕಲಂ 506 ಸಹವಾಚಕ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಮೇಲ್ಕಾಣಿಸಿದ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಪ್ರ-1ಃ ಮೇಲೆ ಹೇಳಿದ ಅಂಶಗಳು ನಿಮಗೆ ಅರ್ಥವಾಗಿದೆಯೇ?

ಉಃ

ಪ್ರ-2ಃ ನೀವು ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕಾ?

ಉಃ

ಮೇಲ್ಕಂಡ ವಿಷಯವನ್ನು ಆರೋಪಿತರಿಗೆ ಓದಿ ಹೇಳಿ ಸರಿಯೆಂದು ಒಪ್ಪಿದ್ದು ಅದರಂತೆ ಹೇಳಿಕೆ ಮಾಡಿಕೊಂಡಿದ್ದೇನೆ.

ದಿ: 07-03-2023
ಕೆ.ಆರ್.ಪೇಟೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಕೃಷ್ಣರಾಜಪೇಟೆ.